ಮಾಡಿ, ‘ಹೂಂ... ಅಂತೂ ಆ ಕಳ್ಳಬಡ್ಡೀಮಗ ಕಡೆಗೂ ಕೈಕೊಟ್ಟುಬಿಟ್ಟನಲ್ಲ.... ಹುಂ... ಇರಲಿ. ಅವನ್ನ ದಫನ್ ಮಾಡಿಸೋ ಖರ್ಚೂ ಬಿತ್ತು. ಅದನ್ನೂ ಸೇರಿಸಬೇಕು ಆ ಪ್ರಾಣ ಪ್ರತಿಷ್ಠಾಪನೆ ಖರ್ಚಿಗೆ’ ಎಂದರು.

‘ಮತ್ತೆ ಪೊಲೀಸ್...’ ಗೌಡರು ಬಾಯಿ ತೆಗೆದರು.

‘ನಾನು ನೋಡಿಕೋತೀನಿ ಅವರನ್ನು, ಏನು ಮಹಾ, ಬಿಡಿ ನಂಗೆ ಅದನ್ನು. ಅಷ್ಟು ಖರ್ಚು ಮಾಡಿದರಾಯ್ತು... ಹುಂ. ಆ ಖರ್ಚನ್ನೂ ಸೇರಿಸಬೇಕಾಗುತ್ತೆ. ನಮ್ಮ ಪಟ್ಟಿಗೆ, ಎಷ್ಟು ಅಂತ ಆಮೇಲೆ ಹೇಳ್ತೀನಿ’ ಸಾಹುಕಾರರು ಧೈರ್ಯ ಕೊಟ್ಟರು.

‘ಇದೂ, ಈ ಸಾವೂ ದೇವಸ್ಥಾನದಲ್ಲೇ ಆದ ಮೇಲೆ ಶುದ್ಧೀ ಸಂಸ್ಕಾರದ ಖರ್ಚು ಇನ್ನೂ ಸ್ವಲ್ಪ ಹೆಚ್ಚಾಗುತ್ತೆ’ ಪೂಜಾರಪ್ಪನವರು ಯೋಚಿಸುತ್ತ ಹೇಳಿದರು.

‘ಆಗಲೇಳಿ, ಅದೇನು ಮಹಾ, ಎಷ್ಟಾದೀತು. ಅದನ್ನೂ ಸೇರಿಸೋಣ. ಅಷ್ಟೆ’ ಸಾಹುಕಾರರು ಒಪ್ಪಿಕೊಂಡರು.


‘ಮತ್ತೆ ಒಂದು ಮಾತು. ಈ ಕಳ್ಳಸೂಳೇ ಮಗ ಸತ್ತದ್ದು ಗುಟ್ಟಾಗಿಟ್ಟಿರಬೇಕು. ತಿಳಿದೋರು ಯಾರೂ ತುಟಿಪಿಟಿಕ್ ಅನ್ನಬಾರದು. ತಪ್ಪಿದರೆ ಭಾರಿ ದಂಡ ಬೀಳುತ್ತೆ. ಕಠಿಣ ಶಿಕ್ಷೇನೂ ಆಗುತ್ತೆ. ಕುಲಕ್ಕೆ ಹೊರಗೂ ಹಾಕಲಾಗುತ್ತೆ ಬೇಕಾದರೆ ಅಂತ ಊರಿನ ಎಲ್ಲರಿಗೂ ತಿಳಿಯಪಡಿಸಬೇಕು. ಪಟೇಲ್ರೆ, ತೋಟಿ ತಳವಾರ ಇನ್ನೇನು ಬರ್‍ತಾರೆ. ನೀವು ಗೌಡ್ರು, ಶಾನುಭೋಗ್ರು– ಅಂದ್ರೆ ಇಲ್ಲಿರೋ ನೀವೆಲ್ಲ ಪ್ರಮುಖರು ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು, ತಿಳೀತೇ?’ ಎಂದರು.

ಎಲ್ಲರೂ ತಲೆಯಾಡಿಸಿದರು.

ಹೀನಕೃತ್ಯ ಪ್ರಕರಣ ಮುಕ್ತಾಯವಾಯಿತು.


ಪ್ರಜಾವಾಣಿ ಪ್ರಕಾಶನ

ಹೆಮ್ಮೆಯ ಪ್ರಕಟಣೆ



ಬೆಲೆ ₹ 400

# ಕನ್ನಡ ಸಣ್ಣಕಥೆಗಳ ಹೊನ್ನ ಕಣಜ

**ಅರವತ್ತು ವರ್ಷಗಳ ಇತಿಹಾಸದ ‘ಪ್ರಜಾವಾಣಿ’ ದೀಪಾವಳಿ ಕಥಾಸ್ಪರ್ಧೆಯ ಬಹುಮಾನಿತ ಕಥೆಗಳ ಮೊದಲ ಸಂಪುಟ.**

ಪೂರ್ಣಚಂದ್ರ ತೇಜಸ್ವಿ, ಪಿ. ಲಂಕೇಶ್, ಭಾರತೀಸುತ, ಎಸ್. ದಿವಾಕರ್, ಬಿ.ಸಿ. ರಾಮಚಂದ್ರ ಶರ್ಮ, ಬೆಸಗರಹಳ್ಳಿ ರಾಮಣ್ಣ, ವೈದೇಹಿ, ಶ್ರೀಕೃಷ್ಣ ಆಲನಹಳ್ಳಿ, ವಿವೇಕ ಶಾನಭಾಗ, ಜಯಂತ ಕಾಯ್ಕಿಣಿ, ಸುಮತೀಂದ್ರ ನಾಡಿಗ, ವೀರಭದ್ರ, ಜಿ.ಕೆ. ಗೋವಿಂದರಾವ್, ಸುಧಾಕರ, ಬೊಳುವಾರು, ಕೆ.ಟಿ. ಗಟ್ಟಿ, ಮೊಗಳ್ಳಿ ಗಣೇಶ್, ಅಮರೇಶ ನುಗಡೋಣಿ, ಎಂ.ಎಸ್. ಶ್ರೀರಾಮ್, ಅಬ್ದುಲ್ ರಶೀದ್, ಶಾಂತಿ ಅಪ್ಪಣ್ಣ ಸೇರಿದಂತೆ ಐವತ್ತು ಕಥೆಗಾರರ ಐವತ್ತು ಕಥೆಗಳ ಅಪೂರ್ವ ಕಥಾಗುಚ್ಛ ಈಗ ‘ನವಕರ್ನಾಟಕ’ದ ಹಾಗೂ ನಿಮ್ಮ ಸಮೀಪದ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯ.

ಆನ್‌ಲೈನ್ ಖರೀದಿಗೆ: navakarnatakaonline.com

ನವಕರ್ನಾಟಕ ಪುಸ್ತಕ ಮಳಿಗೆಯ ಸಂಪರ್ಕಕ್ಕೆ: 080 22203106 / 22161914